ಕ್ರ ಸಂ	ಕೃಷಿ ಸಾಲ		ನೇಕಾರಿಕೆ ಸಾಲ		ಮೀನುಗಾರಿಕೆ ಸಾಲ	
	ಪ್ರ.ಸಂಖ್ಯೆ	ಮೊತ್ತ	ಪ್ರ.ಸಂಖ್ಯೆ	ಮೊತ್ತ	ಪ್ರ.ಸಂಖ್ಯೆ	ಮೊತ್ತ
1	2630255	7466.97	6315	71.61	2412	6.07

ಆ) ಹೌದು.

ಇ) 2008–09 ಮತ್ತು 2009–10ನೇ ಸಾಲಿನಲ್ಲಿ ನೇಕಾರಿಕೆ ವೃತ್ತಿಗೆ ನೇಕಾರ ಸಹಕಾರ ಸಂಘಗಳು/ಪತ್ತಿನ ಸಹಕಾರ ಸಂಘಗಳು/ಡಿ.ಸಿ.ಸಿ. ಬ್ಯಾಂಕುಗಳು ಮತ್ತು ಇತರೆ ಸಹಕಾರ ಸಂಘಗಳು ಶೇ.3 ರ ಬಡ್ಡಿದರದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲವನ್ನು ಒದಗಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ನೂತನ ಉಪಕಾರಾಗೃಹ ಕಾಮಗಾರಿ

218(542) ಶ್ರೀ ಸುಭಾಷ್ ಆರ್ ಗುತ್ತೇದಾರ್:(ಆಳಂದ) ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ನೂತನ ಉಪಕಾರಾಗೃಹ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಉಪ ಕಾರಾಗೃಹ ನಿರ್ಮಾಣ ಕಾಮಗಾರಿಗಾಗಿ ಅಂದಾಜಿಸಲಾಗಿರುವ ಅಂದಾಜು ಮೊತ್ತವೆಷ್ಟು, ಈ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ?

ಇ) ಈ ಕಾಮಗಾರಿ ಯಾವ ಹಂತದಲ್ಲಿದೆ? (ಪೂರ್ಣ ಮಾಹಿತಿ ನೀಡುವುದು)?

ಶ್ರೀ ಉಮೇಶ್ ವಿ ಕತ್ತಿ(ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು):

ಅ) ಬಂದಿದೆ.

ಆ) ಈ ಉಪಕಾರಾಗೃಹ ನಿರ್ಮಾಣ ಕಾಮಗಾರಿಗಾಗಿ ಅಂದಾಜಿಸಲಾಗಿರುವ ಮೊತ್ತ ರೂ. 150.00 ಲಕ್ಷಗಳು. ಈ ಕಾಮಗಾರಿಯನ್ನು ಇನ್ನೂ ಪ್ರಾರಂಭಿಸಬೇಕಾಗಿದೆ.

ಇ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಉಪ ಬಂದೀಖಾನೆ ನಿರ್ಮಾಣಕ್ಕೆ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 39 ಪಿಆರ್‌ಎ 87, ದಿನಾಂಕ:17.1.1989 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ ರೂ.15.00 ಲಕ್ಷಗಳನ್ನು ಪ್ರಾರಂಭಿಕವಾಗಿ ಮಂಜೂರು ಮಾಡಲಾಗಿತ್ತು.

ಸದರಿ ಮೊತ್ತದಲ್ಲಿ ಮೊದಲ ಹಂತದ ಕಾಮಗಾರಿಗಳನ್ನು ಪ್ರಾರಂಭಿಸಿ ಬ್ಯಾರಕ್ಕುಗಳು, ಸೆಲ್ಲುಗಳು, ಶೌಚಾಲಯ, ಸ್ನಾನಘಟ್ಟ, ಇತ್ಯಾದಿಗಳನ್ನು ನಿರ್ಮಿಸಲಾಗಿದೆ. ಸದರಿ ಕಟ್ಟಡವನ್ನು ಇಲಾಖಾ ವಶಕ್ಕೆ ಪಡೆಯುವ ಮೊದಲು ದಿನಾಂಕ: 31.7.1998 ರಂದು ಪರಿವೀಕ್ಷಣೆ ನಡೆಸಲಾಗಿ, ಕಾಮಗಾರಿಯಲ್ಲಿ ಹಲವಾರು ನ್ಯೂನತೆಗಳು ಕಂಡಿಬಂದಿರುತ್ತವೆ. ಅವುಗಳನ್ನು ಸರಿಪಡಿಸಲು ಲೋಕೋಪಯೋಗಿ ಇಲಾಖೆಯವರನ್ನು ದಿನಾಂಕ 22.6.1994ರ ಪತ್ರದ ಮೂಲಕ ಕೋರಲಾಯಿತು. ಆದರೆ ಲೋಕೋಪಯೋಗಿ ಇಲಾಖೆಯವರು ಇದುವರೆವಿಗೂ ನ್ಯೂನತೆಗಳನ್ನು ಸರಿಪಡಿಸದೇ ಇದ್ದುದರಿಂದ ಕಟ್ಟಡವನ್ನು ಇಲಾಖಾ ವಶಕ್ಕೆ ಪಡೆಯಲಾಗಿರುವುದಿಲ್ಲ.

ನೂತನ ಕಟ್ಟಡದ ಕಾಮಗಾರಿ ಗುಣಮಟ್ಟ ಕಳಪೆಯಾಗಿದ್ದುದರಿಂದ ಬಳಕೆಯಾಗದೆಯೇ ಕಟ್ಟಡ ಶಿಥಿಲಗೊಂಡಿದ್ದು ಕುಸಿದು ಬಿದ್ದಿರುತ್ತದೆ. ಸುರಕ್ಷತೆ ದೃಷ್ಟಿಯಿಂದ ಅಲ್ಲಿ ಬಂದಿಗಳನ್ನು ವಾಸಕ್ಕೆ ಇಡುವುದು ಸೂಕ್ತವಲ್ಲವೆಂದು ಕಂಡು ಬಂದಿದೆ. ಸರ್ಕಾರವು ಆದೇಶ ಸಂಖ್ಯೆ:ಹೆಚ್‌ಡಿ 211 ಪಿಆರ್‌ಎ 2006, ದಿನಾಂಕ:23.2.2008ರಲ್ಲಿ, ಆಳಂದದಲ್ಲಿ ನೂತನ ತಾಲ್ಲೂಕು ಉಪಕಾರಾಗೃಹ ಕಾಮಗಾರಿಯನ್ನು ಕೈಗೊಳ್ಳಲು ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ.

ಈ ಮೊತ್ತವನ್ನು ಲೋಕೋಪಯೋಗಿ ಇಲಾಖೆ ಅಭಿಯಂತರಲ್ಲಿ ಡಿ.ಡಿ. ಮೂಲಕ ದಿನಾಂಕ:19.9.2008ರಲ್ಲಿ ಠೇವಣಿ ಇಡಲಾಗಿದೆ.

ದಿನಾಂಕ:8.4.2008 ರಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರ ಕಛೇರಿಯಲಿ ಮುಖ್ಯ ಅಭಿಯಂತರು, ಸಂಪರ್ಕ ಮತ್ತು ಕಟ್ಟಡ, ಧಾರವಾಡ, ಅಧೀಕ್ಷಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಧಾರವಾಡ ಇವರೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ, ಈಗ ಸರ್ಕಾರವು ಒದಗಿಸಿರುವ ರೂ.100.00ಲಕ್ಷಗಳಿಗೆ

ಸೀಮಿತಗೊಳಿಸಿ ಅಗತ್ಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರೈಸಲು ನಕ್ಷೆ ಮತ್ತು ಅಂದಾಜನ್ನು ಸಲ್ಲಿಸಲು ಲೋಕೋಪಯೋಗಿ ಇಲಾಖೆಯವರಿಗೆ ಸೂಚಿಸಲಾಯಿತು.

ಅದರಂತೆ, ಮುಖ್ಯ ವಾಸ್ತು ಶಿಲ್ಪಿಗಳೊಡನೆ ಹಲವಾರು ಬಾರಿ ಸಭೆಗಳನ್ನು ನಡೆಸಿ, ಪರಿಷ್ಕೃತ ನಕ್ಷೆಗಳನ್ನು ತಯಾರಿಸಲಾಗಿದೆ. ಅದರಂತೆ ಲೋಕೋಪಯೋಗಿ ಇಲಾಖೆಯ ಅಭಿಯಂತರರು ಅಂದಾಜುಗಳನ್ನು ತಯಾರಿಸಿಕೊಟ್ಟಿರುತ್ತಾರೆ. ಅಂದಾಜು ಪಟ್ಟಿಗಳಿಗೆ ದಿನಾಂಕ:4.7.2009 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಆದರೆ ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ

ಮುಖ್ಯ ವಾಸ್ತುಶಿಲ್ಪಿಗಳಿಂದ ಪರಿಷ್ಕೃತ ನಕ್ಷೆ ಪಡೆಯಲು ಹಾಗೂ ಅದರನ್ವಯ ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆಯುವಲ್ಲಿ ಸಾಕಷ್ಟು ಕಾಲ ವ್ಯಯವಾಗಿರುತ್ತದೆ. ಆಗಿನ ವಿನ್ಯಾಸ ಮತ್ತು ಅಂದಾಜು ಪಟ್ಟಿಗಳು ಹಳೆಯದಾಗಿರುತ್ತದೆ. ಪ್ರಸ್ತುತ ವಿನ್ಯಾಸಗಳಿಗೆ ಹೊಂದಾಣಿಕೆ ಆಗುವುದಿಲ್ಲ.

ಇತ್ತೀಚೆಗೆ ಶಿವಮೊಗ್ಗದಲ್ಲಿ ನೂತನ ಮಾದರಿ ಕಾರಾಗೃಹ ನಿರ್ಮಿಸಲು ಯೋಜಿಸಿ ನುರಿತ ವಾಸ್ತುಶಿಲ್ಪಿಗಳಿಂದ ಆಧುನಿಕ ಕಾರಾಗೃಹದ ವಿನ್ಯಾಸ ಮತ್ತು ನಕ್ಷೆ ತಯಾರಾಗುತ್ತಿದೆ. ಈ ಹೊಸ ವಿನ್ಯಾಸದಂತೆಯೇ ಆಳಂದದಲ್ಲಿಯೂ ಸಹ ಮಾದರಿ ಕಾರಾಗೃಹ ನಿರ್ಮಿಸಲು ಉದ್ದೇಶಿಸಿ, ಈ ಹಿಂದೆ ನೀಡಲಾಗಿದ್ದ ಆಡಳಿತಾತ್ಮಕ ಮಂಜೂರಾತಿಯನ್ನು ತಾತ್ಕಾಲಿಕವಾಗಿ ದಿನಾಂಕ:29.5.2010ರಂದು ಹಿಂತೆಗೆದುಕೊಳ್ಳಲಾಗಿದೆ. ಆಧುನಿಕ ವಿನ್ಯಾಸ ಮತ್ತು ನಕ್ಷೆಗಳು ತಯಾರಾದ ಕೂಡಲೆ ಲೋಕೋಪಯೋಗಿ ಇಲಾಖೆಯಿಂದ ಅಂದಾಜುಪಟ್ಟಿ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ರಸ್ತೆ ಅಗಲೀಕರಣ

219(544) ಶ್ರೀ ಸುಭಾಷ್ ಆರ್ ಗುತ್ತೇದಾರ್:(ಆಳಂದ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ನಗರದ ರಜವಿ ರಸ್ತೆಯನ್ನು (ಔರಾದ್ ಸದಾಶಿವಗಡ್ ರಾಜ್ಯ ಹೆದ್ದಾರಿ ವ್ಯಾಪ್ತಿಯ) ಅಗಲೀಕರಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;